ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No: 0821-234338

CHAMUNDESHWARI ELECTRICITY
SUPPLY CORPORATION LIMITED
*(A Government of Karnataka Undertaking)*
Corporate Office,
CESC, Mysuru-570017
**Web Site: www.cescmysore.org.**
E-mail ID:gmhrd@cescmysore.org

Company Identity Number[CIN]:- U40109KA2004SGC035177

ಕ್ರಮಾಂಕ : ಪ್ರವ್ಯ(ಆ ಮತ್ತು ಮಾ.ಸಂ)/ಉಪ್ರವ್ಯ/ಸಪ್ರವ್ಯ/ವ್ಯ/2021- 22/ cys-874 ದಿನಾಂಕ: 21 SEP 2021
ಲಗತ್ತು: ನಿಗದಿತ ನಮೂನೆ ಪ್ರತಿ

# ಸುತ್ತೋಲೆ

ವಿಷಯ: ನ್ಯಾಯಾಲಯದ ಪ್ರಕರಣಗಳಿಗೆ LCO (Litigation Conducting Officer) ನೇಮಕ ಮಾಡುವ ಬಗ್ಗೆ.

ಉಲ್ಲೇಖ: 1. ಈ ಕಛೇರಿ ಪತ್ರ ಸಂಖ್ಯೆ: ಪ್ರವ್ಯ(ಆ ಮತ್ತು ಮಾ.ಸಂ)/ವ್ಯ1/ಸವ್ಯ1/ಹಿಸ/18449-52 ದಿನಾಂಕ: 07.03.2014.
2. ಈ ಕಛೇರಿ ಪತ್ರ ಸಂಖ್ಯೆ: ಪ್ರವ್ಯ(ಆ ಮತ್ತು ಮಾ.ಸಂ)/ವ್ಯ1/ಸವ್ಯ1/ಎಲ್‌ಎನ್-57/14-15/11006-07 ದಿನಾಂಕ: 27.10.2014.
3. ಈ ಕಛೇರಿ ಪತ್ರ ಸಂಖ್ಯೆ: ಪ್ರವ್ಯ(ಆ ಮತ್ತು ಮಾ.ಸಂ)/ವ್ಯ1/ಸವ್ಯ1/ಎಲ್‌ಎನ್-58/14-15/11004-05 ದಿನಾಂಕ: 27.10.2014.

******

ಉಲ್ಲೇಖಿತ ಪತ್ರಗಳಲ್ಲಿ ಚಾವಿಸನಿನಿ ವ್ಯಾಪ್ತಿಯಲ್ಲಿನ ಎಲ್ಲಾ ನ್ಯಾಯಾಲಯ ಪ್ರಕರಣಗಳಿಗೆ Litigation Conducting Officer (LCO) ನೇಮಕ ಮಾಡಿ ನಿಗಮ ಕಛೇರಿಗೆ ಮಾಹಿತಿ ನೀಡುವಂತೆ ಈಗಾಗಲೇ ಸೂಚಿಸಲಾಗಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ವೃತ್ತ/ವಿಭಾಗಗಳಿಂದ ನ್ಯಾಯಾಲಯ ಪ್ರಕರಣಗಳಿಗೆ LCO ನೇಮಕಗೊಳಿಸದಿರುವುದು ನಿಗಮದ ಗಮನಕ್ಕೆ ಬಂದಿರುತ್ತದೆ. ಹಲವಾರು ಪ್ರಕರಣಗಳಲ್ಲಿ ನ್ಯಾಯಾಲಯ ಪ್ರಕರಣಗಳನ್ನು ವ್ಯವಸ್ಥಿತವಾಗಿ ನಿರ್ವಹಿಸದೆ, ಪ್ರಕರಣಗಳನ್ನು ಸೂಕ್ತ ರೀತಿಯಲ್ಲಿ ಹಿಂಬಾಲಿಸದೇ, ಕಾಲಕಾಲಕ್ಕೆ ನ್ಯಾಯಾಲಯದಿಂದ ಹೊರಡಿಸುವ ಆದೇಶಗಳ ಬಗ್ಗೆ ಪ್ಯಾನಲ್ ವಕೀಲರ ಅಭಿಪ್ರಾಯ ಕೋರದೆ ಹಾಗೂ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳದೇ ಅತುರ ಅತುರವಾಗಿ ನ್ಯಾಯಾಲಯದಿಂದ ಜಪ್ತಿ ಆದೇಶ ಹೊರಡಿಸಿದ ನಂತರ ಪರಿಹಾರ ಮೊತ್ತ ಠೇವಣಿ ಇಡಲು ಅನುಮೋದನೆ ಕೋರಿ ಪತ್ರ ಬರೆಯುತ್ತಿರುವುದು ನಿಗಮದ ಗಮನಕ್ಕೆ ಬಂದಿರುತ್ತದೆ. ಎಲ್ಲಾ ನ್ಯಾಯಾಲಯ ಪ್ರಕರಣಗಳನ್ನು ಗಣಕೀಕರಣಗೊಳಿಸಲಾಗುತ್ತಿರುವುದರಿಂದ ತಮ್ಮ ವಲಯ/ವೃತ್ತ/ವಿಭಾಗ ವ್ಯಾಪ್ತಿಯಲ್ಲಿ ಎಲ್ಲಾ ನ್ಯಾಯಾಲಯ ಪ್ರಕರಣಗಳಿಗೆ LCO ನೇಮಕಗೊಳಿಸಿ ದಿನಾಂಕ: 31.08.2021ರ ಅಂತ್ಯಕ್ಕೆ ಬಾಕಿ ಇರುವ ನ್ಯಾಯಾಲಯ ಪ್ರಕರಣಗಳ ವಿವರಗಳನ್ನು ನಿಗದಿತ ನಮೂನೆಯಲ್ಲಿ 7 ದಿನದೊಳಗಾಗಿ ಇ-ಮೇಲ್ ಮೂಲಕ agmahr@cescmysore.org ಮತ್ತು managerlegal@cescmysore.org ಸಲ್ಲಿಸಲು ಸೂಚಿಸುವಂತೆ ನಿರ್ದೇಶಿಸಲ್ಪಟ್ಟಿರುತ್ತೇನೆ.

LCO ಆಗಿ ನೇಮಕಗೊಂಡ ಅಧಿಕಾರಿಗಳು ಈ ಕೆಳಕಂಡ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಲಾಗಿದೆ.

- ವೈಯಕ್ತಿಕ ಮುತುವರ್ಜಿವಹಿಸಿ ನ್ಯಾಯಾಲಯ ಪ್ರಕರಣಗಳನ್ನು ದಿನಂಪ್ರತಿ ಪರಿಶೀಲಿಸಿ ಪ್ರತ್ಯೇಕ ನಿರ್ವಹಿಸುವುದು
- ವಕೀಲರಿಗೆ ಪ್ರಕರಣಗಳಿಗೆ ಸಂಬಂಧಿಸಿದಂತೆ ನಿಗಮದಿಂದ ನೀಡಬೇಕಾದ ವಕಾಲತ್ತು, ಅಫಿಡೇವಿಟ್ ಮತ್ತು ಕಂಡಿಕೆವಾರು ಟಿಪ್ಪಣಿ ಹಾಗೂ ಇತರೆ ದಾಖಲಾತಿಗಳನ್ನು ಸಮಯಕ್ಕೆ ಸರಿಯಾಗಿ ಸಂಬಂಧಿತ ಪ್ರಾಧಿಕಾರಿಗಳಿಂದ ಅನುಮೋದನೆ ಪಡೆದು ಒದಗಿಸುವ ವ್ಯವಸ್ಥೆ ಮಾಡುವುದು ಹಾಗೂ ವ್ಯವಸ್ಥಾಪಕ ನಿರ್ದೇಶಕರವರ ಪರವಾಗಿ ನಿರ್ವಹಿಸುವುದು.
- ಅವಶ್ಯವಿರುವ ಪ್ರಕರಣದ ವಿಚಾರಣೆ ವೇಳೆ ಖುದ್ದು ನ್ಯಾಯಾಲಯಕ್ಕೆ ಹಾಜರಾಗಿ ನಿಗಮವನ್ನು ಪ್ರತಿನಿಧಿಸುವುದು
- ಪ್ರಕರಣಕ್ಕೆ ಬೇಕಾಗಿರುವ ಎಲ್ಲಾ ರೀತಿಯ ವಿವರಗಳು ಹಾಗೂ ದಾಖಲೆಗಳನ್ನು ಪ್ರಕರಣ ನಿರ್ವಹಿಸುವ ನಿಗಮದ ವಕೀಲರಿಗೆ ಒದಗಿಸುವ ವ್ಯವಸ್ಥೆ ಮಾಡುವುದು.
- ಕಾಲಕಾಲಕ್ಕೆ ಪ್ರಕರಣಗಳಿಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ಸಂಬಂಧಿಸಿದ ವಹಿಯಲ್ಲಿ ದಾಖಲಿಸುವುದು ಹಾಗೂ ಅದರ ಪ್ರತಿಯನ್ನು ನಿಗಮ ಕಛೇರಿಗೆ ಮಾಹಿತಿಗಾಗಿ ಒದಗಿಸುವುದು.

ಮು.ತಿ.ನೋ....

- LCO ಅಧಿಕಾರಿಗಳು ಬಡ್ತಿ/ವರ್ಗಾವಣೆಗೊಂಡ ಸಂದರ್ಭದಲ್ಲಿ ಅಧಿಕಾರ ಹಸ್ತಾಂತರದ ವೇಳೆ ತಮ್ಮಲ್ಲಿ ಇರುವ ಎಲ್ಲಾ ನ್ಯಾಯಾಲಯ ಪ್ರಕರಣಗಳನ್ನು ಅಧಿಕಾರ ವಹಿಸಿಕೊಂಡ ಅಧಿಕಾರಿರವರಿಗೆ ಕಡ್ಡಾಯವಾಗಿ ವರ್ಗಾಯಿಸಿ ದಾಖಲೆಯನ್ನು ಪಡೆದುಕೊಳ್ಳತಕ್ಕದ್ದು.

ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ)
ಚಾವಿಸನಿನಿ., ಮೈಸೂರು.

**ಪ್ರತಿಗಳು:**

1. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ). ಚಾವಿಸನಿನಿ, ಮೈಸೂರು ಇವರ ಮಾಹಿತಿಗಾಗಿ
2. ಮುಖ್ಯ ಇಂಜಿನಿಯರ್(ವಿ), ಮೈಸೂರು ವಲಯ, ಚಾವಿಸನಿನಿ, ಮೈಸೂರು/ಹಾಸನ ಇವರ ಅವಗಾಹನೆಗಾಗಿ.
3. ಪ್ರಧಾನ ವ್ಯವಸ್ಥಾಪಕರು, ತಾಂತ್ರಿಕ/ವಾಣಿಜ್ಯ/ಖರೀದಿ/ಯೋಜನೆಗಳು/ಲೆಕ್ಕ ಮತ್ತು ಕಂದಾಯ, ನಿಗಮ ಕಛೇರಿ, ಚಾವಿಸನಿನಿ, ಮೈಸೂರು ಇವರ ಮಾಹಿತಿಗಾಗಿ
4. ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಚಾವಿಸನಿನಿ, ಮೈಸೂರು/ ಚಾಮರಾಜನಗರ-ಕೊಡಗು/ ಹಾಸನ/ಮಂಡ್ಯ ಇವರ ಮಾಹಿತಿಗಾಗಿ.
5. ಉಪ ಪ್ರಧಾನ ವ್ಯವಸ್ಥಾಪಕರು(ಎಂ.ಐ.ಎಸ್. ಶಾಖೆ,) ನಿಗಮ ಕಛೇರಿ, ನಿಗಮದ ವೆಬ್‌ಸೈಟ್ ನಲ್ಲಿ ಪ್ರಕಟಿಸಲು.
6. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಚಾವಿಸನಿನಿ ರವರ ಮಾಹಿತಿಗಾಗಿ
7. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ತಾಂತ್ರಿಕ)/ಮುಖ್ಯ ಆರ್ಥಿಕ ಅಧಿಕಾರಿರವರುಗಳ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತ, ಸುತ್ತೋಲೆಯ ಮಾಹಿತಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು(ತಾಂತ್ರಿಕ)/ಮುಖ್ಯ ಆರ್ಥಿಕ ಅಧಿಕಾರಿಯವರ ಗಮನಕ್ಕೆ ತರುವಂತೆ ಕೋರಿದೆ.
8. ವ್ಯ(ಕಾನೂನು)/ಪ್ರ.ಕ.

# CHAMUNDESHWARI ELECTRICITY SUPPLY CORPORATION LIMITED

## Details of Court cases as on 31.08.2021

| SL.NO | FILE NO | DISTRICT | NAME OF THE ZONE | NAME OF THE CIRCLE | NAME OF THE DIVISION | NAME OF THE SUB DIVISION | COURT NAME | Case Type | CASE NO | YEAR | CASE FILED DATE | NATURE OF CASE | NAME OF THE LCO | PETITIONER/ APPELANT NAME | PETITIONER ADVOCATE NAME |
|---|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |
| | | | | | | | | | | | | | | | |

| RESPONDENTS | RESPONDENTS ADVOCATE NAME | AMOUNT INVOLVED | PRESENT STATUS | AMT DEPOSITED BY CESC | CHEQUE NO AND DATE | NEXT HEARING DATE | PANEL ADVOCATE NO | PANEL ADVOCATE MAIL ID | DISPOSED DATE | ACTION TO BE TAKEN | REMARKS |
|---|---|---|---|---|---|---|---|---|---|---|---|
| 17 | 18 | 19 | 20 | 21 | 22 | 23 | 24 | 25 | 26 | 27 | 28 |
| | | | | | | | | | | | |